ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ

ಸಿ.ಸಿ. ನಂ. / 5/2025

| | | |
|---|---|---|
| ಹೆಸರು | : ಸಂದೇಶ್ | ಪಿಡಬ್ಲ್ಯೂ-1 |
| ತಂದೆಯ ಹೆಸರು | : ಸಂಜೀವ | ಸಿಡಬ್ಲ್ಯೂ-2 |
| ವಯಸ್ಸು | : 27 ವರ್ಷ | |
| ವೃತ್ತಿ | : ಖಾಸಗಿ ಕೆಲಸ | |
| ವಾಸ ಸ್ಥಳ | : ಹೊಸಕೋಟೆ | |

ದಿಃ18.12.025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:**

ಚಾಸಾ 1 3 ಮತ್ತು 4 ರವರ ಪರಿಚಯ ಇರುವುದಿಲ್ಲ. ಆರೋಪಿ ಯ ಪರಿಚಯ ಇರುತ್ತದೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ನಿಪಿ-1 ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನು ಎರಡು ದಾಖಲಗಳನ್ನು ತೋರಿಸಿದ್ದು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಶೋಧನಾ ಸಮಚ್ಚಿತ ಆಧಾರ ಮತ್ತು ಮಾದರಿ ಮೊಹರು ನಿಪಿ 2 ಮತ್ತು 3 ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಒಂದು ಫೋಟೋವನ್ನು ನೋಡಿ ಸಾಕ್ಷಿ ಗುರುತಿಸಿದ್ದು ನಿಪಿ 4 ಎಂದು, ಸದರಿ ಪೋಟೋವನ್ನು ಯಾವಾಗ ಎಲ್ಲಿ ತೆಗೆದಿರುತ್ತಾರೆ ಎಂಬುದವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ 1 ರಿಂದ 3 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಆಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ</u>

1. ದಿಃ20.04.2024 ರಂದು ಸಮಯ ಬೆಳಿಗ್ಗೆ 6.45 ಗಂಟೆಗೆ ಅಬಕಾರಿ ಇಲಾಖೆಯವರು ಅಂದಗೋವೆ ಪೈಸಾರಿ ಗ್ರಾಮದ ರಸ್ತೆಯಲ್ಲಿ ಹಾದು ಹೋಗುತಿದ್ದ ನನ್ನ ನ್ನು ಕರೆದು ಅವರಿಗೆ ಬಂದ ದೂರಿನ ವಿಚಾರವನ್ನು ನನಗೆ ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಬರಲು ಕೇಳಿಕೊಂಡಾಗ ನಾನು ಒಪ್ಪಿಕೊಂಡಿರುತ್ತೇನೆ ಎಂರದೆ ಸರಿಯಲ್ಲ. ನಂತರ ಇಲಾಖಾ ಸಿಬ್ಬಂದಿಗಳು ನನ್ನನ್ನು ಕರೆದುಕೊಂಡು ಆರೋಪಿಯ ಮನೆ ಮುಂದೆ ತೆರಳಿದಾಗ ಮನೆಯಲ್ಲಿ ಆರೋಪಿಯು ಹಾಜರಿದ್ದು ಅವರಿಗೆ ಇಲಾಖಾ ಸಿಬ್ಬಂದಿಗಳು ದೂರಿನ ವಿಚಾರವನ್ನು ತಿಳಿಸಿ ಸ್ಥಳದಲ್ಲೇ ನಿಪಿ 2 ರಂತೆ ಶೋಧನಾ ಸಮಚ್ಚಿತ ಆಧಾರವನ್ನುತಯಾರಿಸಿ ತನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂರೆ ಸರಿಯಲ್ಲ. ನಂತರ ನನ್ನ ಸಮಾಕ್ಷಮ ಆರೋಪಿಯ ಮನೆಯನ್ನು ಪ್ರವೇಶಿಸಿ ಶೋಧನೆ ಮಾಡಿ ಮತ್ತು ಮನೆಗೆ ಹೊಂದಿಕೊಂಡಿರುವ ಚಿಲ್ಲರೆ ಅಂಗಡಿಯನ್ನು ಶೋಧನೆ ಮಾಡಿದಾಗ ಅಂಗಡಿಯ ಬಲಭಾಗದ ಮೂಲೆಯವರೆಗೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ಕಂಡುಬಂದಿರುತ್ತದೆ ಎಂರದೆಸರಿಯಲ್ಲ. ನಂತರ ಅವುಗಳನ್ನು ಪರಿಶೀಲಿಸಿ ಎಣಿಸಿ ನೋಡಿದಾಗ ಅವುಗಳು ಒರಿಜಿನಲ್ ಚಾಯ್ಸ್ ಬ್ರಾಂಡಿ ಹೆಸರಿನ 180 ಮಿಲಿ ಯ 21 ಮಧ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ಮತ್ತು 90 ಮಿಲಿಯ 45 ಮಧ್ಯ ತುಂಬಿದ ಟೆಟ್ರಾ ಪ್ಯಾಕೆಟ್ಗಳು ಆಗಿರುತತದೆ ಎಂದೆರ ಸರಿಯಲ್ಲ, ನಂತರ ಇಲಾಖಾ ಸಿಬ್ಬಂದಿಗಳು ಆರೋಪಿಯೊಂದಿಗೆ ಮಧ್ಯವನ್ನು ಹೊಂದಲು ರಹದಾರಿ ಇರುವ ಬಗ್ಗೆ ವಿಚಾರಿಸಿದಾಗ ಅವರ ಬಳಿ ಯಾವುದೇ ರಹದಾರಿ ಇರುವುದಿಲ್ಲ ಎಂದು ತಿಳಿಸಿದ್ದು ಮತ್ತು ಸದರಿ ಮಧ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಹೊಂದಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ದೊರೆತ ಮಧ್ಯದ ಟೆಟ್ರಾ ಪ್ಯಾಕೆಟ್ ಗಳಿಂದ 180 ಮಿಲಿಯ 10 ಟೆಟ್ರಾ ಪ್ಯಾಕೆಟ್ ಗಳು ಮತ್ತು 90 ಮಿಲಿ ಯ 15 ಮಧ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಕ್ಲೀನ್ ಮಾಡಲಾಯಿತು ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿಪಿ 3 ರಂತೆ ಮಾದರಿ ಮೊಹರನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ನಿಪಿ 1 ರಂತೆ ಸಮಯ ಬೆಳಿಗೆಗ 7.00 ಗಂಟೆಯಿಂದ 8.00 ಗಂಟೆಯವರೆಗೆ ಮಹಜರ್ ಬರೆದು ಮೇಲೆ ಹೇಳಿದ ಮಧಚ್ಯೆದ ಟೆಟ್ರಾ ಪ್ಯಾಕೆಟ್ಗಳ್ಳು ವಶಪಡಿಸಿಕೊಂಡಿರುತ್ತಾರೆ ಎಂರದೆ ಸರಿಯಲ. ಸ್ಥಳದಲ್ಲಿ ನಾನು ನಿಪಿ 1 ಕ್ಕ (ಒದಿ ಸಹಿ ಮಾಡಿರುತ್ತೇನೆ ಎಂದರೆಸರಿಯಲ್ಲ. ಸದರಿ ಸಮಯದಲ್ಲಿ ನಿಪಿ 4 ರಂತೆ ಛಾಯಾ ಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ದಿಃ 23.01.2024 ರಂದು ಈಗ ಒದಿ ಹೇಳಿದದಂತೆ ನಾನು ಇಲಾಖೆಯವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆರೆದ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿುತು.

ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಟಿ.ಜೆ.ಪಿ. ವಕೀಲರಿಂದಃ

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-
ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ
ಸೋಮವಾರಪೇಟೆ